ಎಸ್ ಸಿ ನಂ. **01/2018** ಪಿ ಡಬ್ಲ್ಯೂ-3

**ದಿನಾಂಕಃ 10.04.2019 ರಂದು ಸಾಕ್ಷಿಯನ್ನು ಕರೆಯಿಸಿ ಪ್ರಮಾಣೀಕರಿಸಲಾಯಿತು.**

**ಪಾಟೀ ಸವಾಲುಃ- ಶ್ರೀ ಕೆ ಪಿ ಎ ವಕೀಲರಿಂದಃ**

ನಾನು 2005 ರಿಂದ ಪತ್ರ ಬರಹಗಾರನಾಗಿ ಕೆಲಸ ಮಾಡುತ್ತಿದ್ದೇನೆ ನಾನು ಪ್ರತಿದಿನ ಬೇರೆ ಬೇರೆ ದಾಖಲಾತಿಗಳನ್ನು ಬರೆಯುತ್ತಿರುತ್ತೇನೆ ಎಂದರೆ ಸರಿ. ಸಾಮಾನ್ಯವಾಗಿ ಯಾವುದೇ ಬೆರಳಚ್ಚು ಮಾಡಬೇಕಾದರೆ 1 ಇಂಚು ಜಾಗ ಮೇಲ್ಭಾಗದಲ್ಲಿ ಬಿಟ್ಟು ಪ್ರಿಂಟ್ ತೆಗೆಯುತ್ತೇವೆ ಎಂದರೆ ಪ್ರಿಂಟ್ ತೆಗೆಯುವಾಗ ಪೇಜ್ ಹೆಚ್ಚಿಗೆ ಬಿಟ್ಟು ಪ್ರಿಂಟ್ ತೆಗೆಯಾಲಗಿದೆ ಎಂದು ಹೇಳುತ್ತಾರೆ, ಖಾಲಿ ಚಾಪಾ ಕಾಗದ ಮೇಲೆ ಇರುವ ಸಹಿಯನ್ನು ಹೊಂದಾಣಿಕೆ ಮಾಡಲು ಹೆಚ್ಚಿಗೆ ಜಾಗ ಬಿಟ್ಟು ಪ್ರಿಂಟ್ ಹಾಕಲಾಗಿದೆ ಎಂದರೆ ಸರಿಯಲ್ಲ.

ವ್ಯವಹಾರದ ಮಾತುಕತೆ ನನ್ನ ಮುಂದೆ ಆಗಿಲ್ಲ. ಪ್ರತಿವಾದಿ ನಿಪಿ-1 ರ ಒಕ್ಕಣೆಯನ್ನು ಹೇಳಿ ಬರೆಸಿರುತ್ತಾರೆ. ನಿಪಿ-1 ಕ್ಕೆ ವೆಂಕಟೇಶ ಮೂರ್ತಿ, ಪುಟ್ಟಸ್ವಾಮಿಗೌಡ, ಸಾಕ್ಷಿ ಹರೀಶ ಮತ್ತು ಚಂದ್ರೇಗೌಡ ಮತ್ತು ಪತ್ರಬರಹಗಾರನಾಗಿ ನಾನು ಸಹಿ ಮಾಡಿರುತ್ತಾರೆ ಸಾಕ್ಷಿದಾರರ ತಂದೆ ಹೆಸರು ಪತ್ರ ನೋಡಿಯೇ ಹೇಳಬೇಕಾಗುತ್ತದೆ ನನಗೆ ಅವರುಯಾವ ಊರಿನವರು ಎಂದು ನನಗೆ ಮರೆತುಹೋಗಿದೆ. 2014 ನೇ ಇಸವಿಯದಾಗಿದ್ದರಿಂದ ನನಗೆ ಮರೆತುಹೋಗಿರುತ್ತದೆ. ನನ್ನ ಮುಂದೆ ಯಾವುದೇ ವ್ಯವಹಾರ ಆಗದಿದ್ದರೂ ಮತ್ತು ದಾಖಲೆ ಆಗದಿದ್ದರೂ ಕೂಡ ಸುಳ್ಳು ಸಾಕ್ಷಿ ಹೇಳುತ್ತಿದ್ದೇನೆ ಎಂರದೆ ಸರಿಯಲ್ಲ.

ಮರುವಿಚಾರಣೆ ಇಲ್ಲ.

ನನ್ನಃ ಉಃಲೇಃಕ್ಕೆಃ ಬೆರಳಚ್ಚು ಮಾಡಲಾಗಿದೆ

ಓ ಹೇ ಕೇ ಸರಿ ಇದೆ

ಹಿರಿಯ ಸಿವಿಲ್ ನ್ಯಾಯಾಧೀಶರು ಮತ್ತು

ಪ್ರದನ್ಯಾದಂ, ಚನ್ನರಾಯಪಟ್ಟಣ